Date : 22-9-2015

# ಬೇಡಿಕೆ ಹೆಚ್ಚಳ ಮತ್ತು ದಾಸ್ತಾನು ಇಳಿಕೆಯಿಂದ ಕಡ್ಲೆ ದರ ಹೆಚ್ಚಳ

ಬೇಡಿಕೆ ಹೆಚ್ಚಳ ಮತ್ತು ಪ್ರಮುಖ ಮಂಡಿಗಳಲ್ಲಿನ ದಾಸ್ತಾನು ಇಳಿಕೆಯಿಂದ ಕಡ್ಲೆ, ಮಸಾಲೆ ಪದಾರ್ಥಗಳು, ಬೆಲ್ಲ ದರಗಳು ದೇಶವಾದ್ಯಂತ ಗಳಿಕೆ ಕಾಣುತ್ತಿವೆ. ಮುಂಬರುವ ಹಬ್ಬಗಳಿಗಾಗಿ ಬೇಡಿಕೆ ಹೆಚ್ಚಳ ಮತ್ತು ಪ್ರಮುಖ ಮಂಡಿಗಳಲ್ಲಿ ದಾಸ್ತಾನು ಇಳಿಕೆಯಾಗುತ್ತಿದೆ. ವ್ಯಾಪಾರಿಗಳು ಮುಂದೆ ಬೇಡಿಕೆ ಹೆಚ್ಚಳದ ನಿರೀಕ್ಷೆಯಲ್ಲಿದ್ದು, ಕೆಳಸ್ತರದಲ್ಲಿ ಬೇಡಿಕೆ ಹೆಚ್ಚಳವಾಗುತ್ತಿದೆ ಯೆನ್ನಲಾಗುತ್ತಿದೆ. ಮುಂದಿನ ತಿಂಗಳಲ್ಲಿ ಕಡ್ಲೆ ಹೊಸಬೆಳೆಯ ಬಿತ್ತನೆ ಆರಂಭವಾಗುತ್ತಿರುವುದರಿಂದ ಮಧ್ಯ ಪ್ರದೇಶದ ಮಂಡಿಗಳಲ್ಲಿ ಉತ್ತಮ ಗುಣಮಟ್ಟದ ಕಡ್ಲೆಗೆ ಬೇಡಿಕೆ ಹೆಚ್ಚಳವಾಗುತ್ತಿದೆ ಇದರಿಂದ ದರ ಹೆಚ್ಚಳ ಕಾಣುತ್ತಿದೆ.